ವಿಜಯವಾಣಿ
ಕನ್ನಡಿಗರ ಧ್ವನಿ

**Saturday 23rd May 2020, Page No.03**

# RV Trustee Sri. Nandish and RV College of Engineering Principal Donated cheques to Pourakarmikas

ವಿಜಯವಾಣಿ ನಂ.1



ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಟ್ರಸ್ಟಿ ನಂದೀಶ್ ಹಾಗೂ ಆರ್‌ವಿ ಇಂಜಿನಿಯರಿಂಗ್ ಕಾಲೇಜಿನ ಕಾಲೇಜಿನ ಪ್ರಾಂಶುಪಾಲ ಕೆ.ಎನ್. ಸುಬ್ರಹ್ಮಣ್ಯ ಶುಕ್ರವಾರ ಪೌರಕಾರ್ಮಿಕರಿಗೆ ತಲಾ 5 ಸಾವಿರ ರೂ. ಗೌರವಧನದ ಡಿಡಿ ವಿತರಿಸಿದರು.

Bengaluru Edition
May 23, 2020 Page No. 3
Powered by : eReleGo.com

# ಆರ್‌ವಿ ಟ್ರಸ್ಟ್‌ನಿಂದ ಧನ ಸಹಾಯ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕರೊನಾ ಭೀತಿ ಆವರಿಸಿರುವ ಸಂದರ್ಭದಲ್ಲಿ ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಸೇವೆಯಲ್ಲಿ ನಿರತರಾಗಿರುವ ಬಿಬಿಎಂಪಿಯ 1 ಸಾವಿರ ಪೌರಕಾರ್ಮಿಕರಿಗೆ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ವತಿಯಿಂದ ತಲಾ 5 ಸಾವಿರ ರೂ. ನೀಡಿ ಗೌರವಿಸಲಾಗಿದೆ.

**» ಪೌರಕಾರ್ಮಿಕರಿಗೆ ತಲಾ 5 ಸಾವಿರ ರೂ. ಡಿಡಿ ವಿತರಣೆ**

ಮೈಸೂರು ರಸ್ತೆಯಲ್ಲಿರುವ ಆರ್.ವಿ. ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಟ್ರಸ್ಟಿ ನಂದೀಶ್ ಹಾಗೂ ಕಾಲೇಜಿನ ಪ್ರಾಂಶುಪಾಲ ಕೆ.ಎನ್. ಸುಬ್ರಹ್ಮಣ್ಯ 6 ವಾರ್ಡ್‌ಗಳ 272 ಪೌರಕಾರ್ಮಿಕರಿಗೆ ತಲಾ 5 ಸಾವಿರ ರೂ.ಗಳ ಡಿಡಿ ವಿತರಣೆ ಮಾಡಿದರು. ಆ ಮೂಲಕ ಈವರೆಗೆ 1 ಸಾವಿರ ಪೌರಕಾರ್ಮಿಕರಿಗೆ ಗೌರವಿಸಿದಂತಾಗಿದೆ.

ಟ್ರಸ್ಟ್‌ನ ಅಧ್ಯಕ್ಷರಾದ ಎಂ.ಕೆ. ಪಾಂಡುರಂಗಶೆಟ್ಟಿ, ಕಾರ್ಯದರ್ಶಿ ಎ.ವಿ.ಎಸ್. ಮೂರ್ತಿ, ಜಂಟಿ ಕಾರ್ಯದರ್ಶಿ ಡಿ.ಪಿ. ನಾಗರಾಜ್ ಅವರ ಪರಿಕಲ್ಪನೆಯಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಮಾಜಕ್ಕೆ ಸೇವೆ ಸಲ್ಲಿಸುತ್ತಿರುವವರನ್ನು ಗೌರವಿಸುವುದು ನಮ್ಮ ಕರ್ತವ್ಯ ಎಂದು ನಂದೀಶ್, ಹೇಳಿದರು.

ಪ್ರಾಂಶುಪಾಲ ಕೆ.ಎನ್. ಸುಬ್ರಹ್ಮಣ್ಯ ಮಾತನಾಡಿ, ಲಾಕ್‌ಡೌನ್ ವೇಳೆಯೂ ಜೀವದ ಹಂಗು ತೊರೆದು ನಗರವನ್ನು ಸ್ವಚ್ಛವಾಗಿಡಲು ಪೌರಕಾರ್ಮಿಕರು ಕಾರ್ಯನಿರ್ವಹಿಸಿದ್ದಾರೆ. ಆರ್.ವಿ. ವಿದ್ಯಾಸಂಸ್ಥೆ ವತಿಯಿಂದ ಈ ಮೂಲಕ ಗೌರವಿಸಲಾಗುತ್ತಿದೆ ಎಂದರು.